ಅಧ್ಯಕ್ಷರು: ಮಾನ್ಯ ಉಮೇಶ್ ಕತ್ತಿಯವರು ಹಾಗೂ ಸಿ.ಸಿ.ಪಾಟೀಲ್‌ರವರು ಪತ್ರ ಬರೆದಿದ್ದಾರೆ.

ಶ್ರೀ ಸಿದ್ದರಾಮಯ್ಯ: ಕಾರಜೋಳರವರೇ, ನೀವು ಒಬ್ಬರೇನಾ? ಎಲ್ಲಾ ಎಲ್ಲಿ ಹೋಗಿದ್ದಾರೆ?

(ಗೊಂದಲ)

ಶ್ರೀ ಎಂ. ಗೋವಿಂದ ಕಾರಜೋಳ: ಸರ್, ಪತ್ರ ಬರೆದು ಅನುಮತಿ ತೆಗೆದುಕೊಂಡು ಆ ಮನೆಗೆ ಹೋಗಿದ್ದಾರೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಯಡಿಯೂರಪ್ಪನವರನ್ನು ತೆಗೆದು ಹಾಕಿ ನೀವೇ ಯಾರಾದರೂ ಆಗಿರಿ.

ಶ್ರೀ ಗೋವಿಂದ ಎಂ. ಕಾರಜೋಳ: ಕೆಲವರು ಆ ಮನೆಗೆ ಹೋಗಿದ್ದಾರೆ. ಮತ್ತೆ ಮಾನ್ಯ ಉಮೇಶ್ ಕತ್ತಿಯವರಿಗೆ ಬೇರೆ ಜವಾಬ್ದಾರಿ ಕೊಟ್ಟಿದ್ದಾರೆ.

ಅಧ್ಯಕ್ಷರು: ಅವರು ಅನುಮತಿ ಕೇಳಿದ್ದಾರೆ.

5. ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:

ಅ) ವಿಷಯ: ಕರ್ನಾಟಕ ಲೋಕಸೇವಾ ಆಯೋಗದವರು ಪ್ರಥಮ ದರ್ಜೆ ಹಾಗೂ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ಅನ್-ಲೈನ್ ಮುಖಾಂತರ ಅರ್ಜಿಗಳನ್ನು ಸಲ್ಲಿಸಲು ಸೂಚಿಸಿದ್ದು, ಇದರಿಂದ ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ತೊಂದರೆ ಆಗುತ್ತಿರುವ ಬಗ್ಗೆ

ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ): Karnataka Public Service Commission ನಿಂದ ಸುಮಾರು 758 ಎರಡನೇ ದರ್ಜೆಯ ಗುಮಾಸ್ತರು ಹಾಗೂ ಪ್ರಥಮ ದರ್ಜೆಯ ಗುಮಾಸ್ತರ ಹುದ್ದೆಗಳಿಗೆ call ಮಾಡಿದ್ದಾರೆ. 10ನೇ ತಾರೀಖು last date ಎಂದು ಹೇಳಿದ್ದಾರೆ. ಪ್ರತಿಯೊಂದು ಅರ್ಜಿಯನ್ನೂ ಕೂಡ on-line ನಲ್ಲಿ ಕೊಡಬೇಕೆಂದು ಆದೇಶ ಮಾಡಿದ್ದಾರೆ. ಹಳ್ಳಿಯಲ್ಲಿರತಕ್ಕಂತಹ ಮಕ್ಕಳಿಗೆ ಇದರಿಂದ ತುಂಬಾ ತೊಂದರೆಯಾಗುತ್ತಿದೆ. ಬಹುತೇಕ ಹಳ್ಳಿಗಳಲ್ಲಿ ಕರೆಂಟ್ ಇರುವುದಿಲ್ಲ, on-line ವ್ಯವಸ್ಥೆ ಕೂಡ ಇರುವುದಿಲ್ಲ. ಹಾಗಾಗಿ ಈ ಪದ್ಧತಿ ಜೊತೆಗೆ ನೇರವಾಗಿ ಟಪಾಲ್ ಮೂಲಕ ಅರ್ಜಿ ಸಲ್ಲಿಸುವಂತಹ ಅವಕಾಶ ಮಾಡಿಕೊಡಬೇಕು ಅಥವಾ ನೇರವಾಗಿ ಅರ್ಜಿಯನ್ನು ತಂದುಕೊಟ್ಟರೂ ಸಹ ಅರ್ಜಿ ಸ್ವೀಕಾರ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಬಹುಶ: ಹಳ್ಳಿ ಮಕ್ಕಳಿಗೆ ಅನುಕೂಲವಾಗುತ್ತದೆ. ಕರೆಂಟ್ ಇಲ್ಲದೇ on-lineನಲ್ಲಿ operate ಮಾಡುವುದು

ಹೇಗೆ? ಹಳ್ಳಿಗಳಿಂದ ತಾಲ್ಲೂಕು headquarter ಗೆ ಸುಮಾರು 20-25 ಕಿ.ಮೀ. ಆಗುತ್ತದೆ. ನನ್ನದೇ ಊರು ತೆಗೆದುಕೊಂಡರೂ ಸಹ ಸುಮಾರು 26 ಕಿ.ಮೀ. ದೂರ ಆಗುತ್ತದೆ. ನಮ್ಮೂರಿಂದ ಅಲ್ಲಿಗೆ ಹೋದರೆ ಕರೆಂಟ್ ಇರುವುದಿಲ್ಲ. ಹಾಗಾಗಿ ದಯಮಾಡಿ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ಈ date ಅನ್ನು 10 ದಿವಸಗಳ ಕಾಲ extend ಮಾಡಿ, ನೇರವಾಗಿ ಟಪಾಲ್ ಮೂಲಕ ಅರ್ಜಿ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು. ಜೊತೆಗೆ ನೇರವಾಗಿ ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟರೆ ಬಹುಶ: ಹಳ್ಳಿ ಮಕ್ಕಳ ಹಿತದೃಷ್ಟಿಯಿಂದ ಇದು ಅನುಕೂಲ ವಾಗುತ್ತದೆ. ದಯಮಾಡಿ ತೀವ್ರವಾದಂತಹ ತೀರ್ಮಾನವನ್ನು ಸರ್ಕಾರ ಮಾಡಬೇಕೆಂದು ಹಳ್ಳಿ ಮಕ್ಕಳ ಪರವಾಗಿ ತಮ್ಮ ಮುಖಾಂತರ ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಶಾಸಕರಾದ ಕೃಷ್ಣಪ್ಪನವರು ಏನು ವಿಷಯ ಪ್ರಸ್ತಾಪ ಮಾಡಿದ್ದಾರೆ, ಕರ್ನಾಟಕ ಲೋಕಸೇವಾ ಆಯೋಗದವರು ಪ್ರಥಮ ಮತ್ತು ದ್ವಿತೀಯ ದರ್ಜೆಯ ಸಹಾಯಕರ ಹುದ್ದೆಗೆ ಅರ್ಜಿ ಕರೆದಿದ್ದು, on-line ಮುಖಾಂತರ ಅರ್ಜಿ ಕರೆದಿದ್ದಾರೆ. ಅದರಿಂದ ಗ್ರಾಮಾಂತರ ವಿದ್ಯಾರ್ಥಿಗಳಿಗೆ ಬಹಳಷ್ಟು ತೊಂದರೆಯಾಗುತ್ತದೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಹೀಗಾಗಿ ಇದರ ಬಗ್ಗೆ ನಾನು ಸರ್ಕಾರದ ಪರವಾಗಿ ಲೋಕಸೇವಾ ಆಯೋಗದ ಛೇರ್ಮನ್ ಜೊತೆಗೆ ಮಾತನಾಡಿ ಇವತ್ತು ಏನು ಗ್ರಾಮಾಂತರ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ ಎನ್ನುವುದರ ಬಗ್ಗೆ ಹೇಳಿ ಇದರ ಬಗ್ಗೆ ಒಂದು ಪರಿವರ್ತನೆ ತರುವ ವಿಚಾರವನ್ನು ಹೇಳುತ್ತೇನೆ. ಸರ್ಕಾರ ಅವರ ಜೊತೆ ಸಂಪರ್ಕದಲ್ಲಿದ್ದುಕೊಂಡು ಇದರ ಬಗ್ಗೆ ಒಂದು ಪರಿಹಾರ ಹುಡುಕುತ್ತದೆ.

(ಗೊಂದಲ)

ಶ್ರೀ ಎಂ.ಟಿ. ಕೃಷ್ಣಪ್ಪ: Amendment ತರಬೇಕಾದರೆ time extend ಮಾಡುವುದಕ್ಕೆ ಒಂದು ಅವಕಾಶ ಮಾಡಿಕೊಡಬೇಕು.

(ಗೊಂದಲ)

ಶ್ರೀ ವೈ.ಎನ್.ರುದ್ರೇಶ್ ಗೌಡ: ಗ್ರಾಮೀಣ ಮಕ್ಕಳು on-line system ಮಟ್ಟಕ್ಕೆ ಹೋಗಿ ಅರ್ಜಿ ಹಾಕುವುದು ಕಷ್ಟ. ಇದಕ್ಕೆ ನೀವು ಪರಿಹಾರ ಮಾಡಲೇಬೇಕು. ಆಗಲೇ ಬೇಕು.

ಶ್ರೀ ಜಗದೀಶ್ ಶೆಟ್ಟರ್: ನಾನು ಅವರ ಜೊತೆ ಮಾತನಾಡುತ್ತೇನೆ.